# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 752 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22/02/2023 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು ಲೋಕೋಪಯೋಗಿ ಇಲಾಖೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕೋಪಯೋಗಿ ಇಲಾಖೆಯಡಿ ಪ್ರಥಮ ದರ್ಜೆ ದ್ವಿತೀಯ ದರ್ಜೆ ತೃತೀಯ ದರ್ಜೆ ಹಾಗೂ ನಾಲ್ಕನೇ ದರ್ಜೆಯ ಗುತ್ತಿಗೆ ಪ್ರರವಾನಗಿಯನ್ನು ಪಡೆಯಲು ಪಡೆಯಲು ಇರುವ ನಿಯಮವೇನು; ಅರ್ಜಿ ಸಲ್ಲಿಸಲು ಬೇಕಾಗುವ ದಾಖಲಾತಿ ಪತ್ರಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆಯಡಿ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ತೃತೀಯ ದರ್ಜೆ ಹಾಗೂ ನಾಲ್ಕನೇ ದರ್ಜೆಯ ಗುತ್ತಿಗೆ ಪರವಾನಗಿಯನ್ನು ಪಡೆಯಲು ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ಪ್ಯಾರ 248 ರಿಂದ 264 ನ್ನು ಪಾಲಿಸಬೇಕಾಗಿರುತ್ತದೆ ಹಾಗೂ KPWD: Contractor Registration/Renewal Portal ನ South Zote /North Zone / North East Zone/Central Zone ವಿಭಾಗದ Required Documents ನಲ್ಲಿ ಅರ್ಜಿ ಸಲ್ಲಿಸಲು ಬೇಕಾಗುವ ಪೂರ್ಣ ದಾಖಲಾತಿ ಪತ್ರಗಳು ದೊರೆಯುತ್ತವೆ. |
| ಆ) | ಮೆಕ್ಯಾನಿಕಲ್ ಮತ್ತು ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದ ಪದವೀಧರರು ನೇರವಾಗಿ ಯಾವ ದರ್ಜೆಯ ಗುತ್ತಿಗೆ ಪರವಾನಗಿಯನ್ನು ಪೆಡೆಯಬಹುದಾಗಿದೆ; (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ಪ್ಯಾರ 253 ರನ್ವಯ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದ ಪದವೀಧರರಿಗೆ ಮಾತ್ರ ನೇರವಾಗಿ 3ನೇ ದರ್ಜೆಯ ಗುತ್ತಿಗೆ ಪರವಾನಗಿಯನ್ನು ಪಡೆಯಲು ಅವಕಾಶವಿರುತ್ತದೆ. |
| ಇ) | ಲೋಕೋಪಯೋಗಿ ಇಲಾಖೆಯಿಂದ ಪಡೆದ ಗುತ್ತಿಗೆ ಪರವಾನಗಿಯು ಬೇರೆ ಇಲಾಖೆಗಳ (ಸಿವಿಲ್ ಕಾಮಗಾರಿಗಳಿಂದ ರಸ್ತೆ, ಕಟ್ಟಡ ಕಾಮಗಾರಿ ಹೊರತುಪಡಿಸಿ) ಗುತ್ತಿಗೆ ಕಾಮಗಾರಿಗಳಿಗೆ ಅನ್ವಯಿಸುತ್ತದೆಯೇ? | ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ ಸಿವಿಲ್ ಗುತ್ತಿಗೆ ಪರವಾನಗಿಯನ್ನು ನೀಡುತ್ತಿದ್ದು, ಆರ್ಥಿಕ ಇಲಾಖೆಯಿಂದ ಹೊರಡಿಸಲಾಗಿದ್ದ ಸುತ್ತೋಲೆ ಸಂಖ್ಯೆ: ಆಇ 72 ವೆಚ್ಚ – 12/ 2022 ದಿನಾಂಕ:02.03.2022ರನ್ವಯ ಲೋಕೋಪಯೋಗಿ ಇಲಾಖೆಯಿಂದ ಪಡೆದ ಗುತ್ತಿಗೆ ಪರವಾನಗಿಯು ಎಲ್ಲಾ ಸರ್ಕಾರಿ ಇಲಾಖೆಗಳ ಗುತ್ತಿಗೆ ಕಾಮಗಾರಿಗಳಿಗೆ ಅನ್ವಯಿಸುತ್ತದೆ. |

**ಸಂಖ್ಯೆ: ಲೋಇ 13 ಬಿಎಲ್ ಕ್ಯೂ 2023**

**(ಸಿ.ಸಿ.ಪಾಟೀಲ)**
ಲೋಕೋಪಯೋಗಿ ಸಚಿವರು.